ಕೇಳಲು ಬಂದಿದ್ದೀಯೆ. ಹೋಗು, ನಿನ್ನ ಒಡೆಯನಿಗೆ ತಿಳಿಸು, ಗೋಗಾಬಾಪಾ ದಾರಿ ಬಿಡುವುದಿಲ್ಲ" ಎಂದು ಹೇಳಿ, ಮುತ್ತು-ವಜ್ರ-ವೈಡೂರ್ಯಗಳ ತಟ್ಟೆಯನ್ನು ಜೋರಾಗಿ ಅಪ್ಪಳಿಸಿ ಎಸೆದುಬಿಟ್ಟನು.

ಬಾಪಾನಿಗೆ ೨೧ ಮಕ್ಕಳು, ೭೪ ಮೊಮ್ಮಕ್ಕಳು ಮತ್ತು ೧೨೫ ಮರಿಮಕ್ಕಳಿದ್ದರು. ಇದಲ್ಲದೆ ಅವನ ಬಳಿ ೯೦೦ ಸಾಹಸಿ ವೀರರ ಚಿಕ್ಕ ಸೈನ್ಯವಿತ್ತು. ೧೫ ದಿನಗಳವರೆಗೆ ಸಿದ್ಧತೆ ನಡೆಯಿತು. ಕೋಟೆಯನ್ನು ರಿಪೇರಿ ಮಾಡಿದರು. ಆಯುಧಗಳನ್ನು ಹರಿತಗೊಳಿಸಿ ಜೋಪಾನಗೊಳಿಸಿದರು. ಚಂಡಿ ಮತ್ತು ಮಹಾ ರುದ್ರರ ಸ್ತುತಿ ಮಾಡತೊಡಗಿದರು. ಒಂದು ದಿನ ಘಜನಿಯ ಸೈನ್ಯವು ಭಾರಿ ಹೆಬ್ಬಾವಿನಂತೆ ಚಲಿಸುತ್ತ ಗೋಗಾಮಡಿಯ ಮುಂದೆ ಹೋಗುತ್ತಿರುವುದನ್ನು ಬಾಪಾ ನೋಡಿದನು. ಘಜನಿಗೆ ಬಾಪಾನೊಡನೆ ಸಂಘರ್ಷ ಬೇಕಿರಲಿಲ್ಲವೇನೋ.

ಪ್ರಧಾನ ಪೂಜಾರಿಯಾದ ನಂದಿದತ್ತನು, "ಬಾಪಾ, ಆಪತ್ತು ದೂರವಾಯಿತು, ಯವನ ಸೈನ್ಯವು ಮುಂದಕ್ಕೆ ಹೋಗಿದೆ" ಎಂದು ಹೇಳಿದನು. ಇದನ್ನು ಕೇಳಿದ ಬಾಪಾನ ಬಿಳಿಯ ಮೀಸೆ ಮತ್ತು ಗಡ್ಡಗಳು ಅದುರತೊಡಗಿದವು.

ಕ್ರೋಧದಿಂದ ಬಾಪಾಜಿಯು, "ಪೂಜಾರಿ ಮಹಾರಾಜ್, ನಮ್ಮ ಶರೀರದಲ್ಲಿ ಒಂದು ಹನಿ ರಕ್ತವಿರುವವರೆಗೆ ಭಗವಾನ್ ಶಂಕರನನ್ನು ಮ್ಲೇಚ್ಛರು ವಿಧ್ವಂಸಗೊಳಿಸುವುದು ಹೇಗೆ ಸಾಧ್ಯ? ನಾವು ಅವರನ್ನು ಹಿಂಬಾಲಿಸೋಣ. ತಾವು ಕೋಟೆಯಲ್ಲಿದ್ದುಕೊಂಡು ಮಕ್ಕಳು ಮತ್ತು ಮಹಿಳೆಯರಿಗೆ ಸದ್ಗತಿಯನ್ನು ಕೊಡಿಸಿ. ನಮ್ಮ ವಂಶದ ಒಂದು ಜೀವವೂ ಅವರ ವಶವಾಗಕೂಡದು" ಎಂದು ಹೇಳಿದನು.

ಯುದ್ಧಸಿದ್ಧತೆಯ ಕಹಳೆ ಮೊಳಗಿತು. ಕುದುರೆ ಮತ್ತು ಒಂಟೆಗಳು ಸಿದ್ಧಗೊಂಡವು. ಕೇಸರಿ ಬಣ್ಣದ ಬಟ್ಟೆ ತೊಟ್ಟ ೧೧೦೦ ವೀರಸೈನಿಕರು ಕೈಗಳಲ್ಲಿ ಬಿಲ್ಲು, ಬಾಣ, ಕತ್ತಿ ಮತ್ತು ಗುರಾಣಿಗಳನ್ನು ಹಿಡಿದು ಘಜನಿ ಮಹಮ್ಮದನ ಒಂದೂಕಾಲು ಲಕ್ಷ ಸೈನ್ಯವನ್ನು ವಿಧ್ವಂಸಗೊಳಿಸಲು ಹೊರಟರು.

ಸ್ತ್ರೀಯರು ಮತ್ತು ೧೦ ವರ್ಷದೊಳಗಿನ ಮಕ್ಕಳಿಗಾಗಿ ಜೌಹರಿನ ದೊಡ್ಡ ಚಿತೆಯನ್ನು ಸಿದ್ಧಗೊಳಿಸಿ ಪುರೋಹಿತ ನಂದಿದತ್ತನು ಅದರಲ್ಲಿ ಅಗ್ನಿಯನ್ನು ಪ್ರಜ್ವಲಗೊಳಿಸಿದನು. ಅವನ ಮಗನು ಯುದ್ಧದಲ್ಲಿ ಹೋರಾಡಲು ಹೊರಟುಹೋಗಿದ್ದನು. ಅವನ ಹೆಂಡತಿ, ಸೊಸೆ ಮತ್ತು ಮಕ್ಕಳು ಇತರ, ಎಲ್ಲ ಸ್ತ್ರೀಯರೊಂದಿಗೆ ಜೌಹರಿನ ಬೆಂಕಿಯಲ್ಲಿ ಧುಮುಕಿದರು.

ಕೇಸರಿ ಬಣ್ಣದ ಬಟ್ಟೆ ತೊಟ್ಟ ಕೆಲವು ವೀರರು ಶರವೇಗದಲ್ಲಿ ಬರುತ್ತಿರುವುದನ್ನು ಕೋಟೆಯ ಕೆಳಗೆ ನಿಂತಿದ್ದ ಯವನ ಸೇನೆಯು ನೋಡಿತು; 'ಅಲ್ಲಾ ಹೋ ಅಕ್ಬರ್' ಎಂದು ಗರ್ಜನೆ ಮಾಡಿತು. ಹಸಿರು ಪೇಟ ಮತ್ತು ಕೆಂಪು ಗಡ್ಡದ ಅಮೀರನು ಆನೆಯ ಮೇಲೆ ಕುಳಿತುಕೊಂಡು ತನ್ನ ಸೈನ್ಯವನ್ನು ಮುಂದಕ್ಕೆ ನಡೆಸತೊಡಗಿದನು.

೯೦ ವರ್ಷದ ವಯೋವೃದ್ಧನಾದ ಬಾಪಾನು ಘೋರವಾದ ಸಿಡಿಲಿನಂತೆ ಎರಗುತ್ತಾ ಯವನರ ನಾಶ ಮಾಡುತ್ತಿದ್ದನು. ಒಂದು ಹಂತದಲ್ಲಿ ಘಜನಿಯ ಸೈನ್ಯವು ದಿಕ್ಕೆಟ್ಟಿತು. ಆದರೆ ಉಭಯ ಸೇನೆಗಳ ಸಂಖ್ಯೆ ಮತ್ತು ಯುದ್ಧ ಸಾಮಗ್ರಿಗಳ ಪ್ರಮಾಣಗಳ ಅಂತರ ಎಷ್ಟಿತ್ತೆಂದರೆ ಎರಡೇ ಗಂಟೆಗಳಲ್ಲಿ ಚೌಹಾನನ ಸೈನಿಕರೆಲ್ಲರೂ ವೀರಗತಿಯನ್ನು ಹೊಂದಿದರು. ಹತ್ತರಷ್ಟು ಮಂದಿ ವೈರಿ ಸೈನಿಕರೂ ಹತರಾದರು. ಗೋಗಾಬಾಪಾನ ಕಡೆ ಉಳಿದವರೆಂದರೆ ಒಬ್ಬ ಮೊಮ್ಮಗ ಸಜ್ಜನ್ ಮತ್ತು ಅವನ ಮಗ ಸಾಮಂತ್ ಮಾತ್ರ. ಅವರಿಬ್ಬರೂ ಮಹಮ್ಮದನ ಆಕ್ರಮಣದ ಮುನ್ಸೂಚನೆಯನ್ನು ಕೊಡುವುದಕ್ಕಾಗಿ ಪ್ರಭಾಸ್ ಪಾಟನ್‌ಗೆ ಹೋಗಿದ್ದರು. ಹಿಂತಿರುಗಿ ಬರುವಾಗ ಅವರು ದಾರಿಯಲ್ಲಿ ಓಡುತ್ತಿದ್ದ ಜನರಿಂದ ಎಲ್ಲಾ ವಿಷಯವನ್ನೂ ತಿಳಿದುಕೊಂಡು, ದುಃಖದಿಂದ ಅಳತೊಡಗಿದರು. ಆದರೆ ಮರುಕ್ಷಣದಲ್ಲೇ ಎಚ್ಚೆತ್ತು ತಮ್ಮ ಕರ್ತವ್ಯದ ಕರೆಗೆ ಓಗೊಟ್ಟರು. ಸಾಮಂತನು ವೇಗವಾಗಿ ಓಡುವ ಒಂಟೆಯನ್ನೇರಿ ಗುರ್ಜರ ರಾಜನಾದ ಭೀಮದೇವನ ಬಳಿಗೆ ಹೋದನು.

ಚೌಹಾನ್ ಸಜ್ಜನನು ಜಾಲೌರ್‌ನ ರಾವಲನನ್ನು ಕಾಣಲು ಹೋದನು. ಅವನಾಗಲೇ ಘಜನಿ ಮಹಮದ್‌ನ ದೂತನಿಗೆ ದಾರಿ ಮಾಡಿಕೊಡಲು ಒಪ್ಪಿಕೊಂಡಿದ್ದ. ಅವನು, "ಗುರ್ಜರ ನರೇಶನಾದ ಭೀಮದೇವನು ನಮ್ಮ ಮಾತುಗಳಿಗೆ ಕಿವಿಕೊಡಲಾರದಷ್ಟು ಗರ್ವಿಯಾಗಿದ್ದಾನೆ. ಈಗ ಅವನಿಗೆ ಸಂಕಟ ಬಂದಿರುವಾಗ ನಾನೇಕೆ ಸಹಾಯ ಮಾಡಲಿ?" ಎಂದು ಹೇಳಿದನು. ಆಗ ಸಜ್ಜನನು, "ಮಹಾರಾಜ, ಇದು ನಿಮ್ಮ ಮತ್ತು ಭೀಮದೇವನ ನಡುವಿನ ವೈಮನಸ್ಯದ ಪ್ರಶ್ನೆಯಲ್ಲ. ದೇಶ ಮತ್ತು ಧರ್ಮಗಳ ಮೇಲೆ ಸಂಕಟ ಎರಗಿದೆ. ಇಂಥ ಸಂದರ್ಭದಲ್ಲಿ ಪರಸ್ಪರ ಭೇದಭಾವವನ್ನು ಮರೆತು ಒಟ್ಟಾಗಿ ಯವನರ ನಾಶ ಮಾಡಬೇಕು" ಎಂದು ವಿಧವಿಧವಾಗಿ ತಿಳಿಹೇಳಿದನು.

ಇದಕ್ಕೂ ರಾವಲನು ಒಪ್ಪದಿದ್ದಾಗ ವ್ಯರ್ಥವಾಗಿ ಸಮಯ ಕಳೆಯುವುದರ ಬದಲು ಸಜ್ಜನನು ತನ್ನ ಒಂಟೆಯನ್ನು ಘಜನಿ ಮಹಮದ್‌ನ ಸೈನ್ಯದ ಕಡೆಗೆ ಓಡಿಸಿದನು. ಮೂರು ನಾಲ್ಕು ದಿನಗಳವರೆಗೆ ಸಾಗಿದ ನಂತರ ಅವನಿಗೆ ಘಜನಿ ಮಹಮದ್‌ನ ದೂತನು ಸಿಕ್ಕಿದನು. ಅವನನ್ನು ಮತ್ತು ಅವನ ಜೊತೆಗಿದ್ದ ಏಳು ಜನ ಸೈನಿಕರನ್ನು ಕೊಂದು ಅವನ ಬಳಿ ಇದ್ದ ಒಪ್ಪಿಗೆಯ ಪತ್ರ, ದೂತನ ಕತ್ತಿ ಮತ್ತು ಗುಪ್ತ ಸಂಕೇತವನ್ನು ತೆಗೆದುಕೊಂಡು ಘಜನಿ ಮಹಮದ್‌ನ ಸೈನ್ಯದ ಕಡೆಗೆ ಹೊರಟನು. ಆ ವೇಳೆಗೆ ಆ ಸೈನ್ಯದಲ್ಲಿ ೩೦ ಸಾವಿರ ಕುದುರೆ ಸವಾರರು, ೫೦ ಸಾವಿರ ಬಿಲ್ಲಾಳುಗಳು ಮತ್ತು ಮುನ್ನೂರು ಆನೆಗಳಿದ್ದವು. ೪ ಸಾವಿರ ಒಂಟೆಗಳ ಮೇಲೆ ನೀರು ಮತ್ತು ಆಹಾರ ಪದಾರ್ಥಗಳಿದ್ದುವು. ಈ ಮೊದಲು ಇಷ್ಟು ದೊಡ್ಡ ಸೈನ್ಯ ಯಾರ ಬಳಿಯೂ ಇರಲಿಲ್ಲ.

ಸಜ್ಜನನು ಸೈನ್ಯದ ನಾಯಕನಿಗೆ ರಹಸ್ಯ ಸಂಕೇತವನ್ನು ತೋರಿಸಿದನು. ಅವನನ್ನು ಘಜನಿ ಮಹಮದ್‌ನ ಬಳಿಗೆ ಕರೆದೊಯ್ಯಲಾಯಿತು. ಅಮೀರನು ಒಂದು ದೊಡ್ಡ ಸುಪ್ಪತ್ತಿಗೆಯ ಮೇಲೆ ಕುಳಿತಿದ್ದನು. ಹರಿತವಾದ ಕತ್ತಿಗಳನ್ನು ಕೈಯಲ್ಲಿ ಹಿಡಿದು ಸೈನಿಕರು ಜಾಗೃತರಾಗಿ ನಿಂತಿದ್ದರು. ಜಾಲೌರಿನ ರಾವಲನು ತಮ್ಮ ದೂತನನ್ನು ರಕ್ಷಣಾದಳದ ಸಮೇತ ಸಂಹರಿಸಿದ್ದಾನೆ; ರಾವಲ್ ಮತ್ತು ಮಾರವಾಡದ ರಾಜ ರಣಮಲ್ಲರ ಒಟ್ಟಾದ ಸೈನ್ಯವು ಯುದ್ಧಕ್ಕೆ ಸಿದ್ಧವಾಗಿದೆ ಎಂದು ಸಜ್ಜನನು ದುಭಾಷಿಯ ಸಹಾಯದಿಂದ ತಿಳಿಸಿದನು. ಗುರುತಿಗಾಗಿ ದೂತನ ಕತ್ತಿಯನ್ನು ಘಜನಿ